ಶ್ರೀ ಜೆ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಹೌದು.

ಆ) ಕಾವೇರಿ ಬೇಸಿನ್‌ನಲ್ಲಿ ೧೯೭೧ರವರೆಗೆ ೧೭೭ ಟಿಎಂಸಿ ನೀರನ್ನು ಕರ್ನಾಟಕ ಉಪಯೋಗಿಸಿದೆ. ಅಂತಿಮವಾಗಿ ಒಟ್ಟು ೪೧೪ ಟಿಎಂಸಿ ನೀರನ್ನು ಉಪಯೋಗಿಸಲು ಯೋಜನೆಗಳನ್ನು ತಯಾರಿಸಿದೆ. ಮಾರ್ಚ್ ೧೯೮೯ರವರೆಗೆ ೬೪೦ ಕೋಟಿ ರೂಪಾಯಿಗಳ ವೆಚ್ಚವಾಗಿದೆ. ಕೃಷ್ಣಾ ಬೇಸಿನ್‌ನಲ್ಲಿ ಒಟ್ಟು ೭೫೭ ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ೫೨ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಸಿದ್ಧಗೊಳಿಸಲಾಗಿದ್ದು. ೨೪ ಯೋಜನೆಗಳು ಮುಗಿದಿದೆ ೧೩ ಯೋಜನೆಗಳು ನಿರ್ಮಾಣ ಹಂತದಲ್ಲಿದ್ದು ಉಳಿದ ೧೫ ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಕೃಷ್ಣಾ ಬೇಸಿನ್‌ನ ಎಲ್ಲಾ ಯೋಜನೆಗಳನ್ನು ಕ್ರಿ. ಶ. ೨೦೦೦ ಇಸವಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ರಾಜ್ಯದ ಜನತಾ ನ್ಯಾಯಾಲಯಗಳು

೧೦೦. ಶ್ರೀ ಜೆ. ರಾಜುಗೌಡ (ಹನೂರು).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಯೋಜನೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೮–೮೯ ಹಾಗೂ ೧೯೮೯–೯೦ರಲ್ಲಿ ರಾಜ್ಯದಲ್ಲಿನ ಜನತಾ ನ್ಯಾಯಾಲಯದಿಂದ ಎಷ್ಟು ವ್ಯಾಜ್ಯಗಳು ತೀರ್ಮಾನಗೊಂಡಿವೆ ?

ಆ) ಇಂಥ ಶಿಬಿರಗಳು ಪ್ರತಿ ತಿಂಗಳು ಪ್ರತಿ ತಾಲ್ಲೂಕಿನಲ್ಲೂ ನಡೆಸಲು ಏನಾದರೂ ಅಡ್ಡಿ ಆತಂಕ ಇದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು).—

ಅ) ೧೯೮೮–೮೯ರಲ್ಲಿ—೭,೪೨೬ ವ್ಯಾಜ್ಯಗಳು
೧೯೮೯–೯೦ರಲ್ಲಿ—೫,೧೭೩ ವ್ಯಾಜ್ಯಗಳು
(೪–೩–೯೦ರವರೆಗೆ) ———
ಒಟ್ಟು ೧೨,೫೯೯ ವ್ಯಾಜ್ಯಗಳು

ಆ) ಕಾನೂನಿನ ನೆರವು ಸಮಿತಿಗಳಲ್ಲಿ ಸಾಕಷ್ಟು ಸಿಬ್ಬಂದಿ ಹಾಗೂ ನ್ಯಾಯವಾದಿಗಳ ಹೆಚ್ಚಿನ ಸಹಕಾರ ದೊರಕಿದಲ್ಲಿ ಪ್ರತಿ ತಿಂಗಳು ಪ್ರತಿ ತಾಲ್ಲೂಕಿನಲ್ಲಿ ಹೆಚ್ಚಿನ ಜನತಾ ನ್ಯಾಯ್ಯಾಲಯ ನಡೆಸಲು ಯಾವ ತೊಂದರೆಗಳು ಇಲ್ಲ.

ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕ್ರೀಡಾ ಸಂಸ್ಥೆಗಳು

೧೦೫. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ರಾಜ್ಯ ಮಟ್ಟದ ಕ್ರೀಡಾ ಸಂಸ್ಥೆಗಳು ಯಾವುವು ?

ಆ) ಈ ಅನುದಾನಿತ ಸಂಸ್ಥೆಗಳ ಆಡಳಿತ ನಿಯಮ ಬದ್ಧವಾಗಿ ನಡೆಯುವಂತೆ ನೋಡಿಕೊಳ್ಳಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಇ) ರಾಜ್ಯದಲ್ಲಿ ಯಾವುದಾದರೂ ಕ್ರೀಡಾ ಸಂಸ್ಥೆಗಳ ಆಡಳಿತ ಸಮರ್ಪಕವಾಗಿ ನಡೆಯುತ್ತಿಲ್ಲ ವೆಂದು ದೂರುಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದರೆ ಆ ಕ್ರೀಡಾ ಸಂಸ್ಥೆಗಳು ಯಾವುವು ?

ಶ್ರೀ ಎಂ. ವೀರಪ್ಪಮೊಯಿಲಿ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು).—

ಅ) ಕರ್ನಾಟಕ ರಾಜ್ಯ ಸರ್ಕಾರದಿಂದ ಅನುದಾನ ರೂಪವಾಗಿ ಹಣ ಪಡೆಯುತ್ತಿರುವ ಕ್ರೀಡಾ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ 'ಅ" ದಲ್ಲಿ ಇಡಲಾಗಿದೆ.

ಆ) ಈ ಅನುದಾನಿತ ಕ್ರೀಡಾ ಸಂಸ್ಥೆಗಳು ನೋಂದಾಯಿತ ಕ್ರೀಡಾ ಸಂಸ್ಥೆಗಳಾಗಿದ್ದು ಸಾಕಷ್ಟು ರೀತಿಯ ನಿಯಂತ್ರಣ ಸರ್ಕಾರಕ್ಕೆ ಇರುವುದಿಲ್ಲ. ಆದರೂ ಆಡಳಿತಾತ್ಮಕ ವಿಚಾರದಲ್ಲಿ ಲೋಪದೋಷಗಳು ಕಂಡು ಬಂದರೆ ಅನುದಾನ ಸಂಹಿತೆಯ ಪ್ರಕಾರ ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ ಕ್ರಮತೆಗೆದುಕೊಳ್ಳುವುದು.

ಇ) ಹೌದು

ಈ) ೧ ಕರ್ನಾಟಕ ಅಮೆಚೂರ್ ಅಥ್ಲೆಟಿಕ್ ಸಂಸ್ಥೆ.
೨ ಕರ್ನಾಟಕ ಕಬ್ಬಡಿ ಸಂಸ್ಥೆ
೩ ಕರ್ನಾಟಕ ಮಹಿಳಾ ಕ್ರಿಕೆಟ್ ಸಂಸ್ಥೆ
೪ ಕರ್ನಾಟಕ ಓಲಂಪಿಕ್ ಸಂಸ್ಥೆ.

ANNEXURE-'A'

LIST OF ASSOCIATIONS

1 Karnataka Amateur Athletic Association.
2 Karnataka Amateur Archery Association.
3 Karnataka Atya Patya Association.
4 Karnataka Amateur Body Bildiers Association.
5 Karnataka Badminton Association.
6 Karnataka Ball Badminton Assn.
7 Karnataka State Billiards Assn.
8 Karnataka State Basketaball Assn.
9 Karnataka State Bridge Assn.
10 Karnataka Amateur Boxing Assn.
11 The National Association for the Blind.
12 Karnataka State Carrom Assn.
13 Karnataka Amateur Cycling Assn.
14 Karnataka State Cricket Assn.
15 Karnataka Ladies Cricket Assn.
16 Karnataka Chess Association.
17 The Association of the Deaf.
18 Karnataka Women's Football Assn.
19 Karnataka State Football Assn.
20 Karnataka State Gymnastic Assn.
21 Karnataka State Women's Hockety Assn.
22 Karnataka State Hockey Assn.
23 Karnataka Amateur Handball Assn.
24 Karnataka Judo Association.
25 Karnataka Karate-Do Assn.
26 Karnataka Kon-kho Association.
27 Karnataka Rajya Amateur Kabaddi Assn.

28 Karnataka State Lawn Tennis Assn.
29 Karnataka Mountaineering Council.
30 Karnataka Olympic Assn.
31 Karnataka Power Lifting Assn.
32 Naseoh (National Society for equal opportunity for the Handicapped).
33 Karnataka State Rifly Association.
34 Karnataka Roller Skating Association.
35 Softbal Association of Karnataka.
36 Karnataka Shootingball Assn.
37 Karnataka State Swimming Assn.
38 Karnataka Table Tennis Assn.
39 Karnataka Tennikoit Assn.
40 Karnataka Throwball Assn.
41 Karnataka Volleyball Assn.
42 Karnataka Veterans Athletic Assn.
43 Karnataka Wrestling Association.
44 Karnataka Weightlifters Assn.
45 Karnataka Yoga Association.
46 Karnataka Tug-of-War Assn.
47 Karnataka Sepak Takraw Assn.
48 Karnataka Dae Kwon Do Assn.
49 Karnataka Mallakhamba Assn.
50 Karnataka Baseball Association.
51 Karnataka Rowing Association.

ವಾರ್ತಾ ಇಲಾಖೆಯು ಹೊರತಂದ ಸರ್ಕಾರದ ಸಾಧನೆಗಳು ಮತ್ತು ಇತರ ಪ್ರಕಟಣೆಗಳ ಬಗ್ಗೆ ತಗುಲಿದ ಖರ್ಚು

೧೦೬. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನಾ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ೧-೬-೧೯೮೭ ರಿಂದ ೩೧-೬-೧೯೮೮ ರವರೆಗೆ ವಾರ್ತಾ ಇಲಾಖೆಯಿಂದ ಹೊರತಂದ ಸರ್ಕಾರದ ಸಾಧನೆಗಳು, ಮಂಖ್ಯಮಂತ್ರಿಗಳ ಭಾಷಣಗಳು ಮತ್ತಿತರ ಪ್ರಕಟಣೆಗಳು ಎಷ್ಟು ?

ಆ) ಸರ್ಕಾರ ಈ ಪ್ರಕಟಣೆಗಾಗಿ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನಾ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖಾ ಸಚಿವರು).—